ಜೊತೆಗೆ ಸಾಲ ಕೂಡ ಬರುತ್ತದೆ. ಅದರಲ್ಲಿ ಇರತಕ್ಕಂಥ ನಿಬಂಧನೆಗಳ ಪ್ರಕಾರ ಅಭಿವೃದ್ಧಿಯ ಕೆಲಸವನ್ನು ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು : ಈಗ ಪ್ರಶ್ನೋತ್ತರ ಮುಗಿಯಿತು. ಇನ್ನು ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಈ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿ): ಮಾನ್ಯ ಅಧ್ಯಕ್ಷರೇ, 5.8.2003ರಂದು ಲಿಖಿತ ಮೂಲಕ ಉತ್ತರಿಸುವ 108 ಪ್ರಶ್ನೆಗಳ ಪೈಕಿ 78 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು : *ಮಂಡಿಸಲಾಯಿತು.* (ಅನುಬಂಧ–1)

ಶ್ರೀ ಅರಗ ಜ್ಞಾನೇಂದ್ರ : ನಮ್ಮ ಚುಕ್ಕೆ ಗುರುತಿನ ಪ್ರಶ್ನೆಗಳ ಗತಿ ಏನಾಯಿತು?

ಅಧ್ಯಕ್ಷರು : ಇನ್ನೂ ನಾಲ್ಕು ದಿವಸ ಸಮಯ ಇದೆ.

ಶ್ರೀ ಅರಗ ಜ್ಞಾನೇಂದ್ರ : ಹತ್ತನೇ ತಾರೀಖಿನ ಚುಕ್ಕಿ ಗುರುತಿನ ಪ್ರಶ್ನೆಗೆ ಉತ್ತರ ಇನ್ನೂ ಬಂದಿಲ್ಲ.

ಅಧ್ಯಕ್ಷರು : ಇಲ್ಲಿ ಕೇಳಬೇಡಿ. ತಾವು ಎದ್ದರೆ ಎಲ್ಲರೂ ಎದ್ದೇಳುತ್ತಾರೆ. ನನ್ನ ಚೇಂಬರ್‌ಗೆ ಬನ್ನಿ. ಅದಕ್ಕೆ ಏನು ಉಪಾಯವೆಂದು ಹುಡುಕೋಣ. ಇನ್ನು ಮುಂದೆ ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು.

2. ಸಭೆಯ ಮುಂದಿಡಲಾದ ಕಾಗದ ಪತ್ರಗಳು

I **ಶ್ರೀ ಹೆಚ್.ಕೆ. ಪಾಟೀಲ್ (ಜಲಸಂಪನ್ಮೂಲ ಮಂತ್ರಿ): (ಮುಖ್ಯಮಂತ್ರಿ ಅವರ ಪರವಾಗಿ)** ಮಾನ್ಯ ಅಧ್ಯಕ್ಷರೇ,

ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ಅಧಿನಿಯಮ 12(7) ರನ್ವಯ:

1. ಶ್ರೀ ಪಿ.ಎನ್. ಗುರುಮೂರ್ತಿ, ಜಿಲ್ಲಾ ವಾರ್ತಾಧಿಕಾರಿ, ಮೈಸೂರು ವಿಭಾಗ, ಮೈಸೂರು, ಇವರ ವಿರುದ್ಧ – ಲೋಕಾಯುಕ್ತ ಅವರ ವರದಿ ಮತ್ತು ಶಿಫಾರಸ್ಸುಗಳಿಗೆ ಸಂಬಂದಿಸಿದಂತೆ ವಿಶೇಷ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

II **ಶ್ರೀ ಹೆಚ್.ಕೆ. ಪಾಟೀಲ್ (ಜಲಸಂಪನ್ಮೂಲ ಸಚಿವರು):** ಮಾನ್ಯ ಅಧ್ಯಕ್ಷರೇ, **1980** ಕಾಡಾ ಅಧಿನಿಯಮ **25**ನೇ ಕಲಂ ಮೇರೆಗೆ:

2. ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಕೃಷ್ಣ ಮೇಲ್ದಂಡ ಯೋಜನೆ ಭೀಮರಾಯನಗುಡಿ, ಗುಲ್ಬರ್ಗಾ 2002–03ನೇ ಸಾಲಿನ ವಾರ್ಷಿಕ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

III **ಶ್ರೀ ಹೆಚ್.ಕೆ. ಪಾಟೀಲ್ (ಜಲಸಂಪನ್ಮೂಲ ಸಚಿವರು): (ಗ್ರಾಮೀಣಾಭಿವೃದ್ಧೀ ಮತ್ತು ಪಂಚಾಯತ್ ರಾಜ್ ಸಚಿವರ ಪರವಾಗಿ)** ಮಾನ್ಯ ಅಧ್ಯಕ್ಷರೆ,

1993ರ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 262(3)ನೇ ಮತ್ತು 300(5)ನೇ ಪ್ರಕರಣದ ಮೇರೆಗೆ:

3. ಉಡುಪಿ ಜಿಲ್ಲಾ ಪಂಚಾಯತ್ ನ 1999–200ನೇ ಸಾಲಿನ ವಾರ್ಷಿಕ ಲೆಕ್ಕಗಳು ಮತ್ತು ಆಡಿಟ್ ವರದಿ

4. ಚಿತ್ರದುರ್ಗ ಜಿಲ್ಲಾ ಪಂಚಾಯತ್‌ನ 2001–02ನೇ ಸಾಲಿನ ವಾರ್ಷಿಕ ವರದಿ.

5. ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್‌ನ 2001–02ನೇ ಸಾಲಿನ ವಾರ್ಷಿಕ ಆಡಳಿತ ವರದಿ.

6. ಧಾರವಾಡ ಜಿಲ್ಲಾ ಪಂಚಾಯತ್‌ನ 1999–2000ನೇ ಸಾಲಿನ ಪರಿಶೋಧನಾ ವರದಿ ಮತ್ತು ವಾರ್ಷಿಕ ಲೆಕ್ಕಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

IV **ಶ್ರೀ ಹೆಚ್.ಕೆ. ಪಾಟೀಲ್ (ಜಲಸಂಪನ್ಮೂಲ ಸಚಿವರು): (ವಸತಿ ಸಚಿವರ ಪರವಾಗಿ) ಮಾನ್ಯ ಅಧ್ಯಕ್ಷರೆ,**

1962ರ ಕರ್ನಾಟಕ ಗೃಹ ಮಂಡಳಿ ಕಾಯ್ದೆಯ ನಿಯಮ 20(2)ರ ಮೇರೆಗೆ:

7. ಕರ್ನಾಟಕ ಗೃಹ ಮಂಡಳಿ 2002–03ನೇ ಸಾಲಿನ ವಾರ್ಷಿಕ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

V **ಶ್ರೀ ಹೆಚ್.ಕೆ. ಪಾಟೀಲ್ (ಜಲಸಂಪನ್ಮೂಲ ಸಚಿವರು):** (ಬೃಹತ್ ಹಾಗೂ ಮಾಧ್ಯಮ ಕೈಗಾರಿಕಾ ಸಚಿವರ ಪರವಾಗಿ) ಮಾನ್ಯ ಅಧ್ಯಕ್ಷರೆ,

1956ರ ಕಂಪನಿ ಕಾಯ್ದೆಯ ಅಧಿನಿಯಮ 619(ಎ)ಪ್ರಕರಣದ ಮೇರೆಗೆ:

8. ಮೈಸೂರು ಮಿನರಲ್ಸ್ ಲಿಮಿಟೆಡ್ ನ 2001–02ನೇ ಸಾಲಿನ ವಾರ್ಷಿಕ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

VI **ಶ್ರೀ ಕುಮಾರ್ ಬಂಗಾರಪ್ಪ (ಪೌರಾಡಳಿತ ರಾಜ್ಯ ಸಚಿವರು): (ನಗರಾಭಿವೃದ್ಧಿ ಸಚಿವರ ಪರವಾಗಿ) ಮಾನ್ಯ ಅಧ್ಯಕ್ಷರೆ,**

1987ರ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರದ ಅಧಿನಿಯಮ 48(5) ಮತ್ತು 49ನೇ ಪ್ರಕರಣದ ಮೇರೆಗೆ:

9. ಉಡುಪಿ ನಗರಾಭಿವೃದ್ಧಿ ಪ್ರಾಧಿಕಾರದ 2001–02ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

10. ಹಾಸನ ನಗರಾಭಿವೃದ್ಧಿ ಪ್ರಾಧಿಕಾರದ 2002–03ನೇ ಸಾಲಿನ ವಾರ್ಷಿಕ ವರದಿ.

11. ಉಡುಪಿ ನಗರಾಭಿವೃದ್ಧಿ ಪ್ರಾಧಿಕಾರದ 2002–03ನೇ ಸಾಲಿನ ವಾರ್ಷಿಕ ವರದಿ.

12. ಚಿತ್ರದುರ್ಗ ನಗರಾಭಿವೃದ್ಧಿ ಪ್ರಾಧಿಕಾರದ 2002–03ನೇ ಸಾಲಿನ ವಾರ್ಷಿಕ ವರದಿ.

13. ಗುಲ್ಬರ್ಗಾ ನಗರಾಭಿವೃದ್ಧಿ ಪ್ರಾಧಿಕಾರದ 2002–03ನೇ ಸಾಲಿನ ವಾರ್ಷಿಕ ವರದಿ.

14. ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದ 2002–03ನೇ ಸಾಲಿನ ವಾರ್ಷಿಕ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

VII **ಶ್ರೀ ಕುಮಾರ್ ಬಂಗಾರಪ್ಪ (ಪೌರಾಡಳಿತ ರಾಜ್ಯ ಸಚಿವರು):** (ಉನ್ನತ ಶಿಕ್ಷಣ ಸಚಿವರ ಪರವಾಗಿ) ಮಾನ್ಯ ಅಧ್ಯಕ್ಷರೇ,

1976ರ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯದ ಅಧಿನಿಯಮ 45(2), 47(4)ನೇ ಪ್ರಕರಣದ ಮೇರೆಗೆ:

15. ಕರ್ನಾಟಕ ವಿಶ್ವವಿದ್ಯಾನಿಲಯ ಧಾರವಾಡ 2001–02ನೇ ಸಾಲಿನ ವಾರ್ಷಿಕ ಲೆಕ್ಕಪತ್ರ ಮತ್ತು ಲೆಕ್ಕ ಪರಿಶೋಧನೆಯ ಅನುಸರಣಾ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ಮಂಡಿಸಲಾಯಿತು.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ಇವತ್ತು ಅಪರೂಪಕ್ಕೆ ಮಾನ್ಯ ಜನಸಂಪನ್ಮೂಲ ಮಂತ್ರಿಗಳು ಬಂದಿದ್ದಾರೆ. ಶೂನ್ಯ ವೇಳೆಯಲ್ಲಿ ಅವರಿಗೆ ದಯವಿಟ್ಟು ಸ್ವಲ್ಪ ಇರಲಿಕ್ಕೆ ಹೇಳಿ. ಅವರು ಆ ಸದನದ ನಾಯಕರು ಆಗಿರುವುದರಿಂದ ಯಾವಾಗಲೂ ಅಲ್ಲೇ ಇರುತ್ತಾರೆ. ಇವತ್ತು ಅಪರೂಪಕ್ಕೆ ನಮ್ಮ ಸದನಕ್ಕೆ ಬಂದಿದ್ದಾರೆ. ಮಾನ್ಯ ನೀರಾವರಿ ಮಂತ್ರಿಗಳಾದ ಶ್ರೀ ಹೆಚ್.ಕೆ. ಪಾಟೀಲರ ಗಮನಕ್ಕೆ ಕೆಲವು ಮುಖ್ಯವಾದ ವಿಚಾರಗಳನ್ನು ತರತಕ್ಕದ್ದು ಇದೆ. ರಾಜ್ಯದ ಮಹತ್ವದ ವಿಚಾರಗಳನ್ನು ಅವರ ಗಮನಕ್ಕೆ ತರಬೇಕಾಗಿರುವುದರಿಂದ ದಯವಿಟ್ಟು ಅವರಿಗೆ ಇವತ್ತು ಶೂನ್ಯವೇಳೆಯಲ್ಲಿ ಇರುವುದಕ್ಕೆ ತಾವು ಹೇಳಬೇಕು.

ಅಧ್ಯಕ್ಷರು : ಪ್ರಶ್ನೋತ್ತರ ವೇಳೆ ಇರುವಾಗ ಅವರು ಯಾವಾಗಲೂ ಬರುತ್ತಾರೆ.

3. ತಿದ್ದುಪಡಿ ಪ್ರಸ್ತಾವ

ವಿಷಯ : ಲಾಟರಿಗಳ ಮೇಲೆ ಹೊರಡಿಸಿರುವ ಅಧಿಸೂಚನೆಗಳನ್ನು ಹಿಂದಕ್ಕೆ ಪಡೆಯುವುದು.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಮಾನ್ಯ ಅಧ್ಯಕ್ಷರೆ, ಮಾನ್ಯ ಸೋಮಶೇಖರ್ ಅವರ ತಿದ್ದುಪಡಿ ಪ್ರಸ್ತಾವವನ್ನು ತಂದಿದ್ದಾರೆ. ಆನ್ ಲೈನ್ ಲಾಟರಿ ಮೇಲೆ ರೂಲ್ 61ರಲ್ಲಿ ನೋಟೀಸ್‌ನ್ನು ನಾನು ಮತ್ತು ಶ್ರೀ ಮಲ್ಲಿಕಾರ್ಜುನ್ ಅವರು ಕೊಟ್ಟಿದ್ದೇವೆ. ಪ್ರಾಯಶಃ ಅದಾದಮೇಲೆ ನಮ್ಮದನ್ನು ತಾವು ತೆಗೆದುಕೊಳ್ಳಬೇಕು.

ಅಧ್ಯಕ್ಷರು : ಆಯಿತು. ಅವರದ್ದಾದ ಮೇಲೆ ನೀವು ಮಾತನಾಡಿ.

ಶ್ರೀ ಬಿ. ಸೋಮಶೇಖರ್ (ಮುಳಬಾಗಿಲು) : ಮಾನ್ಯ ಅಧ್ಯಕ್ಷರೆ, ತಮ್ಮ ಅನುಮತಿ ಕೋರಿ ಈ ಕೆಳಕಂಡ ತಿದ್ದುಪಡಿ ಪ್ರಸ್ತಾವವನ್ನು ಸಭೆಯ ಮುಂದೆ ಮಂಡಿಸ ಬಯಸುತ್ತೇನೆ.

"1998 ರ ಲಾಟರಿಗಳ (ವಿನಿಯಮನ) ಅಧಿನಿಯಮ 12(3)ರ ಪ್ರಕರಣದ ಮೇರೆಗೆ ಹೊರಡಿಸಲಾಗಿರುವ ಕೆಳಕಂಡ ಅಧಿಸೂಚನೆಗಳನ್ನು ಹಿಂದಕ್ಕೆ ಪಡೆಯುವುದು.'

1. 2001ರ ಕರ್ನಾಟಕ ಗಣಕೀಕೃತ ನೆಟ್‌ವರ್ಕ್ ಲಾಟರಿ ನಿಯಮಗಳನ್ನು ರಚಿಸಿ ದಿನಾಂಕ 16–5–2001 ರಂದು ಹೊರಡಿಸಲಾದ ಆಇ:181: ಸಉಲಾ 2000 ನೇ ಸಂಖ್ಯೆಯ ಅಧಿಸೂಚನೆ.
2. 1999ರ ಕರ್ನಾಟಕ ರಾಜ್ಯ ಲಾಟರಿ ನಿಯಮಗಳನ್ನು ರಚಿಸಿ, ದಿನಾಂಕ 8–9–2000 ರಂದು ಹೊರಡಿಸಲಾದ ಆಇ: 117:ಸಉಲಾ: 1997ನೇ ಸಂಖ್ಯೆಯ ಅಧಿಸೂಚನೆ."

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಬಿ. ಸೋಮಶೇಖರ್ (ಮಳವಳ್ಳಿ) : ಮಾನ್ಯ ಸಭಾಧ್ಯಕ್ಷರೇ, ನಮ್ಮ ಪ್ರಜಾಪ್ರಭುತ್ವದ ನೀತಿಗನುಗುಣವಾಗಿ ನಮ್ಮ ಪಾರ್ಲಿಮೆಂಟರಿ ಡೆಮಾಕ್ರಸಿಯಲ್ಲಿ ಏನಿದೆ ಎಂದರೆ ಒಂದು ಸರ್ಕಾರ ಆಡಳಿತ ಮಾಡಬೇಕಾದರೆ ಒಂದು ಮಸೂದೆಯನ್ನು ತಂದು ಆ್ಯಕ್ಟ್‌ನ್ನು ಮಾಡಬೇಕು. ಈಗ ಇಲ್ಲಿ ಕಾನೂನು ಮಂತ್ರಿಗಳು ಇರಬೇಕು. ಲಾಟರಿ ಮಂತ್ರಿಗಳು ಇರಬೇಕು.